ದಿನಾಂಕಃ 29-08-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ.ಪಿ ಎಸ್ ಬಿ ವಕೀಲರಿಂದ

ಈ ದಾವೆಯಲ್ಲಿ ನನ್ನ ವಕೀಲರಾಗಿ ಶ್ರೀನಾಥ ರವರು ಇರುತ್ತಾರೆ. ಪ್ರತಿವಾದಿ ವಿರುದ್ಧ ಕೆ ಇ ಐ ಟಿ ಯಲ್ಲಿ ಎರಡು ಅರ್ಜಿ ಸಲ್ಲಿಸಿರುತ್ತೀರಿ ಎಂದರೆ ಸರಿ. ಸರ್ವೆ ನಂ. 1/1 ಮತ್ತು 1/2 ರ ಮೇಲೆ ಅರ್ಜಿ ಸಲ್ಲಿಸಿರುತ್ತೇನೆ. ಸರ್ವೆ ನಂ.1/1 ರ ಮೇಲೆ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಪ್ರತಿವಾದಿ ಮೇಲೆ ಅಸಲು ದಾವೆ ನಂ. 47/2016 ದಾವೆ ಸಲ್ಲಿಸಿದ್ದು ಅದು ಇತ್ಯರ್ಥದಲ್ಲಿ ಇದೆ ಎಂದರೆ ಸರಿ. ಅದಲ್ಲದೆ 74/2018 ರಂತೆ ಇನ್ನೊಂದು ದಾವೆಯನ್ನು ಹಾಕಿರುತ್ತೀರಿ ಎಂದರೆ ಸರಿ. ಮುಂಚೆ ಶಿವಕುಮಾರ್ ಶಿವಗುಂಡಪ್ಪ ಜುಡಿಪಿ ಅಂತ ಇದ್ದು ಅವರು ಆಗುವುದಿಲ್ಲ ಅಂತ ಹೇಳಿದ್ದಕ್ಕೆ ನಾರಾಯಣಸ್ವಾಮಿ ಎಂಬುವವರನ್ನು ನೇಮಿಸಿಕೊಂಡಿರುತ್ತೇವೆ. ಜುಡಿಪಿ ವಕೀಲರ ಮೂಲಕ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟೀಷನ್ ಅನ್ನು ಸರ್ವೆ ನಂ.1/1 ರ ಮೇಲೆ ಹಾಕಿರುತ್ತೀರಿ ಎಂದರೆ ಸರಿ. ಆ ಅರ್ಜಿ ವಜಾ ಆಗಿರುತ್ತದೆ ಎಂದರೆ ಸರಿ. ಮಾನ್ಯ ಉಚ್ಚ ನ್ಯಾಯಾಲಯಹುದಲ್ಲಿ ಅರ್ಜಿ ವಜಾ ಆದ ನಂತರ ಅದರ ಮೇಲೆ ಯಾವುದೇ ಅಪೀಲು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಸರ್ವೆ ನಂ. 1/1 ರ ಮೇಲೆ ನಿಮಗೆ ಯಾವುದೇ ಹಕ್ಕು ಇರುವುದಿಲ್ಲ ಅಂತ ತೀರ್ಮಾನ ಆಯಿತು ಎಂದರೆ ಸರಿಯಲ್ಲ. ಜುಡಿಪಿ ಎಂಬ ವಕೀಲರು ಆ ರಿಟ್ ಅರ್ಜಿ ವಜಾ ಆದ ನಂತರ ಸರ್ವೆ ನಂ. 1/1 ರ ಮೇಲೆ ಕೇಸು ನಡೆಸಲಾಗುವುದಿಲ್ಲ ಅಂತ ವಾಪಸ್ಸು ಕೊಟ್ಟಿರುತ್ತಾರೆ ಎಂದರೆ ಸರಿ. ಬಸವರಾಧ್ಯ ಎಂಬುವವರು ನಿಮ್ಮ ಕುಟುಂಬದ ಮೂಲ ಪುರುಷರು ಎಂದರೆ ಸರಿ. ನಂಜಮ್ಮ ಕೋಂ ಬಸಪ್ಪರಾಧ್ಯ ರವರ ಮೂಲ ಪುರುಷ ಬಸಪ್ಪರಾಧ್ಯ ಎಂದರೆ ಸಾಕ್ಷಿಯು ದಾನಪ್ಪಾರಾಧ್ಯ ಎಂದು ನುಡಿಯುತ್ತಾರೆ. ನಂಜಮ್ಮ ರವರ ಗಂಡ ಬಸಪ್ಪರಾಧ್ಯ ಎಂದರೆ ಸರಿ. ಬಸವರಾಧ್ಯ ಬೇರೆ ಬಸಪ್ಪರಾಧ್ಯ ಬೇರೆ ಎಂದರೆ ಸರಿ. ಬಸವಾರಾಧ್ಯ ರವರು ಮೂಲ ಪುರಷರಾಗಿದ್ದಾಗ ಆ ಕುಟುಂಬಕ್ಕೆ ಸರ್ವೆ ನಂ.1/1 ರ ವಿಷಯವಾಗಿ ಯಾವುದೇ ಹಕ್ಕು ಇಲ್ಲ ಎಂದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತೀರ್ಮಾನ ಆಗಿದೆ ಎಂದರೆ

ಸಾಕ್ಷಿಯು ಗೊತ್ತಿರುವುದಿಲ್ಲ ಎಂದು ನುಡಿಯುತಾರೆ. ಸರ್ವೆ ನಂ.1/1 ರ ವಿಷಯವಾಗಿ ಆರ್ ಎಫ್ ಎ 451/2000 ಹಾಗೂ ಆರ್ ಎಸ್ ಎ 2480/2008 ನಡೆಸುತ್ತಿದ್ದರು ಎಂದರೆ ಸಾಕ್ಷಿಯು ಅದು ನನ್ನ ತಂದೆಯವರು ನಡೆಸುತ್ತಿದ್ದು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ಪ್ರತಿವಾದಿ ಏನು ತಕರಾರು ಹಾಕಿರುತ್ತಾರೆ ಅಂತ ತಿಳಿದುಕೊಂಡಿರುತ್ತೇನೆ. ಅವರ ತಕರಾರಿನಲ್ಲಿ ಆರ್ ಎಫ್ ಎ 451/200 ಹಾಗೂ ಆರ್ ಎಸ್ ಎ 2480/2008 ರ ಬಗ್ಗೆ ಪ್ರಸ್ತಾಪ ಮಾಡಿರುತ್ತಾರೆ ಎಂದರೆ ಸರಿ. ಆ ವಿಷಯವನ್ನು ಯಾವಾಗ ತಿಳಿದುಕೊಂಡಿರುತ್ತೀರಾ ಎಂದರೆ ದಾವೆ ಸಲ್ಲಿಸುವಾಗ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಆಗಲಾದರೂ ನಾನು ನಮ್ಮ ವಕೀಲರ ಮೂಲಕ ಮಾನ್ಯ ಉಚ್ಚ ನ್ಯಾಯದಲ್ಲಿನ ವಿಷಯಗಳ ಬಗ್ಗೆ ತಿಳಿದುಕೊಂಡಿರುವುದಿಲ್ಲ. ಆ ಎರಡೂ ಪ್ರಕರಣ ಬಗ್ಗೆ ತಿಳಿದುಕೊಳ್ಳಲು ಏನು ತೊಂದರೆ ಇತ್ತು ಎಂದರೆ ಸಾಕ್ಷಿಯು ಏನೂ ತೊಂದರೆ ಇಲ್ಲ ಎಂದು ನುಡಿಯುತ್ತಾರೆ.

ಆರ್ ಎಫ್ ಎ 451/2000 ರಲ್ಲಿ ನೀವೂ ಕೂಡ ಪಕ್ಷಗಾರರು ಎಂದರೆ ಪಕ್ಷಗಾರರು ಆಗಿರುತ್ತೇವೆ ನನ್ನ ತಂದೆ ಮೂಲಕ ನಡೆಯುತ್ತಿದ್ದು ಅದರ ಬಗ್ಗೆ ಮಾಹಿತಿ ಇರುವುದಿಲ್ಲ. ನಿಮ್ಮ ತಂದೆಯವರಿಗೆ ಮತ್ತು ನನ್ನ ನಡುವೆ ಯಾವುದೇ ಭಿನ್ನಾಭಿಪ್ರಾಯಗಳು ಇರುವುದಿಲ್ಲ. ನಿಮ್ಮ ತಂದೆಯವರು ನಡೆಸುತ್ತಿದ್ದ ದಾವೆಯಲ್ಲಿ ನೀವೂ ಪಕ್ಷಗಾರರಾಗಿದ್ದರಿಂದ ಅದರ ತೀರ್ಪು ನಿಮಗೂ ಅನ್ವಯಿಸುತ್ತದೆ ಎಂದರೆ ಸರಿ. ಆರ್ ಎಫ್ ಎ 451/2000 ಹಾಗೂ ಆರ್ ಎಸ್ ಎ 2480/2008 ಎರಡು ತೀರ್ಮಾನ ಆದ ನಂತರ ಸರ್ವೆ ನಂ. 1/1 ರ ವಿಷಯವಾಗಿ ಹಕ್ಕುಗಳು ಯಾವುದೇ ವ್ಯತ್ಯಾಸ ಆಗಿರುವುದಿಲ್ಲ ಎಂದರೆ ಸಾಕ್ಷಿಯು ವ್ಯತ್ಯಾಸ ಆಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರಿದು ನಮ್ಮ ಆಸ್ತಿಯನ್ನು ಸೇರಿಸಿ ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಆರ್ ಎಫ್ ಎ 451/2000 ರಲ್ಲಿ ಬಸವರಾಧ್ಯ ಕುಟುಂಬಕ್ಕೆ ಸರ್ವೆ ನಂ.1/1 ರಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಅಂತ ಹೇಳಿ ಸ್ಪಷ್ಟವಾಗಿ ತೀರ್ಮಾನ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಬಸವರಾಧ್ಯ ರವರ ವಂಶಸ್ಥರಿಗೆ ಹಕ್ಕು ಇದೆ ಅಂತ ಪ್ರತಿವಾದಿ ರವರ ಕ್ರಯ ಪತ್ರದಲ್ಲಿ ಬರೆಸಿಕೊಂಡಿರುವುದಿಲ್ಲ ಎಂದರೆ ಬರೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಶ್ರೀನಿವಾಸ್ ರವರ ಕ್ರಯ ಪತ್ರದಲ್ಲಿ ಬಸವರಾಧ್ಯ ವಂಶಸ್ಥರಿಗೆ ಹಕ್ಕು ಇತ್ತು ಅಂತ ಬರೆಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ,1/1 ರ ವಿಷಯವಾಗಿ ಬಸವರಾಧ್ಯ ರವರಿಗೆ ಹಕ್ಕು ಇದೆ ಎಂದು ತೋರಿಸಲು ಕಂದಾಯ ದಾಖಲಾತಿಗಳು ಇದುವರೆಗೂ ಯಾವುದೇ ಇರುವುದಿಲ್ಲ ಎಂದರೆ ಸರಿ. ಸರ್ವೆ ನಂ.1/2 ರ ಜಮೀನಿಗೂ ಸಹ ಕಾಂದಾಯ ದಾಖಲಾತಿಗಳು ಬಸವರಾಧ್ಯ ರವರ ಹೆಸರಿಗೆ ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಬಂದಿದೆ ಎಂದು ನುಡಿಯುತ್ತಾರೆ. ಯಾವುದು ಬಂದಿದೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಕಂದಾಯ ದಾಖಲೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. 2018 ರಲ್ಲಿ ದಾವೆ ಸಲ್ಲಿಸುವ ಕಾಲಕ್ಕೆ ಬಸವರಾಧ್ಯ ವಂಶಸ್ಥರಿಗೆ 1/2 ಯಾವುದೇ ಕಾಂದಾಯ ದಾಖಲೆ ಇರುವುದಿಲ್ಲ ಎಂದರೆ ಇರುವುದಿಲ್ಲ. ಸರ್ವೆ ನಂ.1/2 ರಲ್ಲಿ ಅನೇಕ ಸೈಟ್ ಗಳನ್ನು ಮಾಡಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದರಲ್ಲಿ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸುಳ್ಳು

ನೀವು ಹಾಜರುಮಾಡಿರುವ 2016-17 ರ ಪಹಣಿ ಇರುವುದು ಸರ್ವೆ ನಂ.1/1 ರ ಬಗ್ಗೆ ಮಾತ್ರ ಎಂದರೆ ಸರಿ ಸಾಕ್ಷಿ ಮುಂದುವರಿದು ಅವುಗಳನ್ನು ತಿದ್ದುಪಡಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.1/2 ರ ಪಹಣಿ ಹಾಜರುಮಾಡುವುದಕ್ಕೆ ನಿಮಗೆ ಏನೂ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಸರ್ವೆ ನಂ.1/2 ರ ಪಹಣಿ ಪತ್ರಿಕೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಯಾವ ವರ್ಷದಿಂದ ಯಾವ ವರ್ಷದವರೆಗೆ ಪಹಣಿ ಬೇಕು ಅಂತ ಕೇಳಿರುತ್ತೀರಿ ಎಂದರೆ ಸಾಕ್ಷಿಯು ಸರ್ವೆ ನಂ.1/2 ಕ್ಕೆ ಪಹಣಿ ಪತ್ರಿಕೆಯನ್ನು ಶುರುಮಾಡಿದಾಗಿನಿಂದ ಇಲ್ಲಿಯವರೆಗೆ ಕೇಳಿದ್ದು ಅದರೆ ಪಹಣಿ ಪತ್ರಿಕೆ ಇಲ್ಲ ಅಂತ ಹೇಳಿರುತ್ತಾರೆ. ನಾನು ಮೌಖಿಕವಾಗಿ ದಾಖಲೆಯನ್ನು ಕೇಳಿರುತ್ತೇನೆ. ಬರವಣಿಗೆಯಲ್ಲಿ ಕೇಳಲು ನನಗೆ ತೊಂದರೆ ಇರಲಿಲ್ಲ ನಾನು ಬರವಣಿಗೆಯಲ್ಲಿ ಕೇಳಿರುವುದಿಲ್ಲ. ಸರ್ವೆ ನಂ.1/2 ರಲ್ಲಿ ಸೈಟ್ ಗಳಾಗಿ ವಿಂಗಡನೆ ಆಗಿದ್ದು ಅದರಲ್ಲಿ ಹತ್ತಾರು ಜನರ ಹೆಸರು ಬಂದಿರುವುದರಿಂದ ಆ ಪಹಣಿ ಪತ್ರಿಕೆಯನ್ನು ಹಾಜರುಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.1/2 ಇಂತಹವರೇ ಹೆಸರಿನಲ್ಲಿ ಇತ್ತು ಎಂದು ತೋರಿಸಲು ನಿಮ್ಮ ಬಳಿ ಯಾವುದೇ ರೆವಿನ್ಯೂ ದಾಖಲೆ ಇಲ್ಲ ಎಂದರೆ ಸರಿ. ನಾವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹಾಕಿರುವ ರಿಟ್ ಪಿಟೀಷನ್ ನಂಬರ್ ನೆನಪಿರುವುದಿಲ್ಲ. ಅದರ ನಂ. ರಿಟ್ ಅರ್ಜಿ ಸಂಖ್ಯೆ 4699/2012 ಎಂದರೆ ಸರಿ.

ಈ ದಾವೆಯಲ್ಲಿ ಸರ್ವೆ ನಂ.1/1 ರ ಸ್ಕೂಲ್ ಜವಾನ್ ನಂಜಪ್ಪನವರ ಜಮೀನು ಅಂತ ಹೇಳಿರುತ್ತೇನೆ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

PW1 present, defendant counsel partly cross examined.

For further cross of pw1.

Call on 13-09-2023.

**Prl. C. J. & JMFC,.**
**Chintamani**.